ಬಾವುಟವೆಂಬ ಮಮಕಾರದಿಂದ, ಆ ಬಾವುಟದ ಮುಂದೆ ಮಂಡಿಯೂರಿದೆ. ನನ್ನ ಪೂರ್ವಿಕರನ್ನು, ನನ್ನ ಆಪ್ತರನ್ನು, ನನ್ನ ಗತ ಸಾವಿರ ವರ್ಷಗಳ ಚರಿತ್ರೆಯನ್ನು ಕಣ್ಣಮುಂದೆ ನೋಡಿದಂತಾಗಿ, ಕಣ್ಣಲ್ಲಿ ನೀರಾಡಿತು. ಪ್ರಕಾಶರಾವ್ ಸಹ ಮಮಕಾರದಿಂದ, ತೆಲುಗುತನದಿಂದ ರೋಮಾಂಚಿತನಾದುದನ್ನು ಕಂಡೆ.

ಇನ್ಫರ್ಮೇಷನ್ ಅಧಿಕಾರಿ ನಮ್ಮ ಚರಿತ್ರೆಯನ್ನೆಲ್ಲ ಆಲಿಸಿ, 'ಈಗ ನಿಮಗೇನು ಬೇಕೋ ಹೇಳಿ. ಸಾಧ್ಯವಾದ ಮಟ್ಟಿಗೆ ನಿಮಗೆ ಸಹಾಯಮಾಡಬಲ್ಲೆ' ಅಂದ.

'ತೆನಾಲಿಯಲ್ಲಿ ನಮ್ಮ ತಂದೆ, ಅಣ್ಣ ಇರಬೇಕು. ಈಗವರು ಇದ್ದಾರೋ ಇಲ್ಲವೋ. ಇದ್ದರೆ ಎಲ್ಲಿದ್ದಾರೋ ಕಂಡುಕೊಂಡು ಹೇಳಿ' ಎಂದು ಕೇಳಿದೆ.

ಅಧಿಕಾರಿ ಒಂದು ಕ್ಷಣ ಆಲೋಚಿಸಿದ. ನಮ್ಮಿಂದ ನಮ್ಮವರ ಹೆಸರು, ವಿವರ ಕೇಳಿ ಪಡೆದು, 'ನೀವು ಇಲ್ಲಿಯೇ ಇರಿ. ತೆನಾಲಿಗೆ, ವಿಜಯವಾಡಕ್ಕೆ ಫೋನು ಮಾಡಿ ತಿಳಿದುಕೊಳ್ಳುವೆ. ನಿಮ್ಮವರಿದ್ದರೆ ಅಲ್ಲಿನ ಮಾಹಿತಿ ಅಧಿಕಾರಿಯನ್ನು ಕರೆಸುವೆ. ನೀವೇ ನೇರ ಮಾತಾಡಿಕೊಳ್ಳಬಹುದು' ಎಂದು ಒಳ ಕೋಣೆಗೆ ಹೋದ. ನಾವು ಆತ ಬರುವವರೆಗೆ, ಕೋಣೆಯಲ್ಲಿ ಹಾಸಿದ ರತ್ನಗಂಬಳಿಯ ಬೆಲೆ, ಗೋಡೆಗಳಿಗೆ ನೇತು ಹಾಕಿದ ಬೆಲೆಬಾಳುವ ರೇಷ್ಮೆಯ ಪರದೆಗಳ ಬೆಲೆಯನ್ನು ಅಂದಾಜು ಮಾಡುತ್ತ ಕುಳಿತೆವು.

ಅರ್ಧಗಂಟೆಗೆ ಆತ ಬಂದ. ಬರುತ್ತಲೇ ನನ್ನತ್ತ ತಿರುಗಿ 'ನಿಮ್ಮವರು ತೆನಾಲಿಯಲ್ಲಿಯೇ ಇರುವರು. ನಿಮ್ಮ ತಂದೆ ಮರಣಿಸಿದರಂತೆ. ನಿಮ್ಮ ಅಣ್ಣ ಹೇಳಿದರು. ಹತ್ತು ನಿಮಿಷಗಳಲ್ಲಿ ಫೋನಿನ ಮೂಲಕ ಅವರೊಂದಿಗೆ ಮಾತಾಡಬಹುದು' ಎಂದು, ಪ್ರಕಾಶರಾವ್ ಕಡೆ ತಿರುಗಿ, 'ನಿಮ್ಮ ತಮ್ಮಂದಿರಿಬ್ಬರು, ತಂಗಿ, ಆಕೆಯ ಗಂಡ ವಿಶಾಖಪಟ್ಟಣದಲ್ಲಿ ಇರುವರಂತೆ. ಫೋನಿನಲ್ಲಿ ನಿಮ್ಮೊಡನೆ ಮಾತನಾಡಲು ನಿಮ್ಮ ದೊಡ್ಡ ತಮ್ಮನನ್ನು ಕರೆಸುತ್ತಿದ್ದೇನೆ' ಅಂದ. ನಮಗೆ ಇದೆಲ್ಲ ನಿಜವೆ, ಕನಸೆ ಎಂದು ತಿಳಿಯಲಿಲ್ಲ. ಇಷ್ಟು ಅಲ್ಪಾವಧಿಯಲ್ಲಿ ಇಷ್ಟು ಸಂಗತಿಗಳು ಹೇಗೆ ತಿಳಿದವೆಂದು ನನ್ನ ನರನಾಡಿಗಳು ಉಬ್ಬಿದವು. ಈವರೆಗೆ ಯೂರೋಪಿನಲ್ಲಿ, ಅಮೆರಿಕದಲ್ಲಿ ಇಂತಹ ಸೌಲಭ್ಯಗಳಿರುವುವೆಂದು ಕೇಳಿದ್ದೆ. ಹತ್ತು ನಿಮಿಷಗಳಿಗೆಲ್ಲ ಒಳಕೋಣೆಗೆ ಹೋದೆವು. ಆ ಕೋಣೆ ಇಡೀ ನನಗೇನೂ ಅರ್ಥವಾಗದ ಯಂತ್ರ ನಿರ್ಮಿತವಾಗಿತ್ತು.

ಅಧಿಕಾರಿಯು ನಮ್ಮಿಬ್ಬರನ್ನು ಎರಡು ಸೋಫಾಗಳ ಬಳಿಗೆ ಕರೆದೊಯ್ದು ಕುಳ್ಳಿರಿಸಿ, ಪ್ರಕಾಶರಾವ್ ಕೈಯಿಂದ 'ವಿಶಾಖ 023' ನಂಬರಿಗೆ ಡಯಲ್ ಮಾಡಿಸಿ, ನನ್ನ ಕೈಯಿಂದ 'ತೆನಾಲಿ 023'ಗೆ ಡಯಲ್ ಮಾಡಿಸಿದ. ರಿಸೀವರನ್ನು ಕೈಗೆತ್ತಿಕೊಂಡೆ. ನನ್ನ ಮುಂದೆ ರೇಡಿಯೊದಂತಹ ಒಂದು ಯಂತ್ರವಿತ್ತು. ಅದರ ಮೇಲ್ಭಾಗದಲ್ಲಿದ್ದ ಕನ್ನಡಿ ತೆರೆಯ ಮೇಲೆ ನನ್ನ ಅಣ್ಣನ ರೂಪ ಕಂಡಿತು. ಆ ಕ್ಷಣದಲ್ಲಿಯೇ ನನ್ನ ಕಿವಿಯಲ್ಲಿ 'ಹಲೋ ರಾಜಾ, ಯಾವಾಗ ಬಂದೆ... ಎಲ್ಲಿದ್ದೀಯ...' ಅನ್ನುತ್ತಿದ್ದ ನಮ್ಮ ಅಣ್ಣ. ಇದು ಟೆಲಿವಿಜನ್ ಇದ್ದೀತು ಅಂದುಕೊಳ್ಳುತ್ತ, 'ನಾನೇ ಅಣ್ಣಯ್ಯ' ಅಂದೆ. ನಂತರ ಎರಡು ನಿಮಿಷ ನನ್ನ ಬಾಯಲ್ಲಿ ಮಾತು ಹೊರಡಲಿಲ್ಲ.

ಮರುದಿನ ಬೆಳಿಗ್ಗೆ ಎಂಟು ಗಂಟೆಗೆಲ್ಲ ಆಂಧ್ರ ರಿಪಬ್ಲಿಕನ್ ಏರ್ ಸರ್ವೀಸ್ ವಿಮಾನಗಳಲ್ಲಿ ನಾನು ಇತ್ತ ತೆನಾಲಿಗೆ, ಪ್ರಕಾಶರಾವ್ ಅತ್ತ ವಿಶಾಖಪಟ್ಟಣಕ್ಕೆ, 'ಮತ್ತೆ ಭೇಟಿಯಾಗೋಣ'ವೆಂದು ಬೀಳ್ಕೊಂಡು ಹೊರಟೆವು. ಮುಕ್ಕಾಲು ಗಂಟೆ ಪ್ರಯಾಣದ ನಂತರ ದುಗ್ಗಿರಾಲ ವಿಮಾನ ನಿಲ್ದಾಣದಲ್ಲಿ ಇಳಿದೆ. ನನ್ನ ಅಣ್ಣ, ಅವನ ಮಕ್ಕಳಿಬ್ಬರು ನನ್ನನ್ನು ಕರೆದುಕೊಂಡು ಹೋಗಲು ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಎಲ್ಲರೂ ನನ್ನ ಅಣ್ಣ ಬಂದಿದ್ದ ಚಿಕ್ಕ ಕಾರಿನಲ್ಲಿ ಮನೆಗೆ ಹೊರಟೆವು. ದಾರಿಯಲ್ಲಿಯೇ ನನ್ನ ಸಂದೇಹಗಳನ್ನು ಕೇಳಲು ಪ್ರಾರಂಭಿಸಿದೆ.

'ತೆನಾಲಿ ಇದೇನಾ?' ನನ್ನ ಮೊದಲ ಪ್ರಶ್ನೆ.

'ಹೌದು. ಇತ್ತ ದುಗ್ಗಿರಾದವರೆಗೆ, ಎಲ್ಲಾ ಬೆರೆತು ಹೋಗಿದೆ ರಾಜು' ಅಂದ ಅಣ್ಣಯ್ಯ.

'ಈ ಕಾರು ಯಾರದು ಅಣ್ಣಯ್ಯ?' ಎಂದು ಕೇಳಿದೆ, ಒಬ್ಬ ವಕೀಲನ ಗುಮಾಸ್ತೆ ಕಾರನ್ನು ಹೇಗೆ ಕೊಳ್ಳುತ್ತಾನೆ ಅಂದುಕೊಂಡು.

'ನನ್ನದೇ ರಾಜಾ' ಎಂದು ಹೆಮ್ಮೆಯಿಂದ ಹೇಳಿದ.

'ಕಾರು ತುಂಬಾ ಬೆಲೆಯಲ್ಲವೆ?' ಅಚ್ಚರಿಯಿಂದ ಕೇಳಿದೆ.

'ಅಯ್ಯೋ, 300 ರೂಪಾಯಿ ದೊಡ್ಡ ಬೆಲೆ' ಎಂದು ನಕ್ಕ.

'ನಿಜಾನಾ?'

ಅಷ್ಟರಲ್ಲಿ ಕಾರು ನಿಂತಿತು. ಮನೆಯೊಳಕ್ಕೆ ಹೆಜ್ಜೆ ಇಟ್ಟೆ. ಎಷ್ಟು ಬದಲಾವಣೆ! ಹಿಂದೆ ಒಂದು ಗುಡಿಸಲಲ್ಲಿದ್ದೆವು. ಈಗ ಒಂದು ಮಹಡಿಯಲ್ಲಿ, ಎಲ್ಲ ಅನುಕೂಲಗಳೊಂದಿಗೆ. ಒಬ್ಬ ಸಣ್ಣ ಜಮೀನುದಾರನಂತಿದ್ದ ಅಣ್ಣ.

ಆ ರಾತ್ರಿ ಊಟವಾದ ಮೇಲೆ, ಮಹಡಿಯ ಮೇಲೆ ಕುಳಿತು ಅಣ್ಣನೊಂದಿಗೆ ಮಾತು ಆರಂಭಿಸಿದೆ.

'ಹಾಗಾದರೆ ಅಣ್ಣಯ್ಯ, ಇಷ್ಟು ಮಾರ್ಪಾಡು, ಇಷ್ಟು ಸಂಪತ್ತು, ಆಂಧ್ರದೇಶಕ್ಕೆ ಹೇಗೆ ಬಂತು?'

'ನೀನು ಹುಚ್ಚ ಕಣೊ. ನಿನಗೆ 1883ರ ಮನೋಭಾವ ಇನ್ನೂ ಹೋಗಿಲ್ಲ.'

'ಅದು ಸರಿ ಅಣ್ಣಯ್ಯ, ಇಷ್ಟಕ್ಕೂ ಏನಾಯಿತೊ ಹೇಳು.'

'ಎಲ್ಲ ರಾಜ್ಯಗಳೂ ಪ್ರತ್ಯೇಕ ರಿಪಬ್ಲಿಕ್ಕಾಗಿ ಬೇರ್ಪಡುತ್ತಲೇ ಅವುಗಳ ಸಂಪತ್ತನ್ನು ಅಭಿವೃದ್ಧಿಪಡಿಸಿಕೊಳ್ಳತೊಡಗಿದವು. ಹಾಗೆಯೇ ತೆಲುಗುದೇಶವೂ. ಮೊಟ್ಟಮೊದಲಿಗೆ ಆವರೆಗೆ ಕಡತ ಸೇರಿದ್ದ ಪ್ರಾಜೆಕ್ಟುಗಳ ಪ್ಲಾನುಗಳೆಲ್ಲವನ್ನು ಹೊರದೆಗೆದು ನಿರ್ಮಿಸತೊಡಗಿದರು.'

